ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ:SFS/ADA_2/LAQ-1068/ 2024 -25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 19.07.2024

ಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಶ್ರೀ ಅಲ್ಲಮಪ್ರಭು ಪಾಟೀಲ್(ಗುಲ್ಬರ್ಗಾ ದಕ್ಷಿಣ) ವಿಧಾನ ಸಭೆ ಸದಸ್ಯರು ರವರ ಚುಕ್ಕೆ ರಹಿತ ಪ್ರಶ್ನೆಗೆ ಉತ್ತರ ಸಲ್ಲಿಸುವ ಕುರಿತು.

ಉಲ್ಲೇಖ: ಪ್ರ.ಸಂ: ಪ್ರಶಾವಿಸ/16ನೇವಿಸ/4ನೇಅ/ ಪ್ರ.ಸಂ.1068/2024 ದಿನಾಂಕ:11.07.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಅಲ್ಲಮಪ್ರಭು ಪಾಟೀಲ್ (ಗುಲ್ಬರ್ಗಾ ದಕ್ಷಿಣ) ಮಾನ್ಯ ವಿಧಾನ ಸಭೆ ಸದಸ್ಯರು ಕೇಳಿರುವ ಚುಕ್ಕೆ ರಹಿತ ಪ್ರ.ಸಂ:1068ಕ್ಕೆ ಉತ್ತರವನ್ನು ಸಿದ್ಧಪಡಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಲಗತ್ತು: ಪ್ರ.ಸಂ: 1068/2024 ಗೆ ಉತ್ತರದ ಪ್ರತಿಗಳು.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:	1068
2	ಪ್ರಶ್ನೆ ಕೇಳಿರುವವರು:	ಶ್ರೀ ಅಲ್ಲಮಪ್ರಭು ಪಾಟೀಲ್(ಗುಲ್ಬರ್ಗಾ ದಕ್ಷಿಣ)
3	ಉತ್ತರಿಸಬೇಕಾದ ದಿನಾಂಕ:	24.07.2024
4	ಉತ್ತರಿಸಬೇಕಾದವರು:	ಮಾನ್ಯ ಕೃಷಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮುಂಗಾರು ಚುರುಕಾಗುತ್ತಿದ್ದು, ರೈತರು ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕಾಗಿ ಎದುರಿಸುತ್ತಿರುವ ಸಮಸ್ಯೆಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ರೈತರಿಗೆ ಬೇಕಾಗಿರುವ ವಿವಿಧ ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ರೈತರಿಗೆ ವಿತರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ. • ರಾಜ್ಯದ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು "ಬಿತ್ತನೆ ಬೀಜಗಳ ಪೂರೈಕೆ" ಯೋಜನೆಯಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. • ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಿ, ಬೇಡಿಕೆಯನ್ವಯ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ. • ರೈತರಿಗೆ ರಿಯಾಯಿತಿ ದರದಲ್ಲಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ದೊರಕಿಸಲು ವ್ಯವಸ್ಥೆ ಮಾಡಲಾಗಿದೆ. • ಪ್ರಸ್ತುತ ಸಾಲಿನಲ್ಲಿ ರೈತರಿಗೆ ಭತ್ತ, ರಾಗಿ, ಜೋಳ, ಸಜ್ಜೆ, ಮೆಕ್ಕೆಜೋಳ, ನವಣೆ, ಉದ್ದು, ಹೆಸರು, ಅಲಸಂದೆ, ತೊಗರಿ, ನೆಲಗಡಲೆ, ಸೋಯಾಅವರೆ ಮತ್ತು ಸೂರ್ಯಕಾಂತಿ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಣೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ. • 2024ರ ಮುಂಗಾರು ಹಂಗಾಮಿನಲ್ಲಿ 5.52 ಲಕ್ಷ ಕ್ವಿಂಟಾಲ್

		ಬಿತ್ತನೆ ಬೀಜಗಳ ಬೇಡಿಕೆಯನ್ನು ಅಂದಾಜಿಸಲಾಗಿದ್ದು, ಇದುವರೆಗೂ ಒಟ್ಟು 3.36 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗಿದ್ದು ಬೀಜ ವಿತರಣೆ ಪ್ರಕ್ರಿಯೆ ಪ್ರಗತಿಯಲ್ಲಿದೆ. • ರಾಜ್ಯ ಸರ್ಕಾರದ ಬೀಜಗಳ ಪೂರೈಕೆ ಯೋಜನೆಯಡಿ 2024-25 ನೇ ಸಾಲಿಗೆ ರೂ. 155.00ಕೋಟಿ ಅನುದಾನ ಒದಗಿಸಲಾಗಿರುತ್ತದೆ ರಾಜ್ಯದಲ್ಲಿ ರಸಗೊಬ್ಬರಗಳನ್ನು ರೈತರಿಗೆ ಸಕಾಲದಲ್ಲಿ ಸರಬರಾಜು ಮಾಡಲು ಸೂಕ್ತ ಕ್ರಮವಹಿಸಲಾಗಿದ್ದು, ಸರಬರಾಜು ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ರಸಗೊಬ್ಬರಗಳ ಕೊರತೆಯಾಗದಂತೆ ಸಮರ್ಪಕ ಸರಬರಾಜಿಗೆ ಇಲಾಖೆ ವಹಿಸಿದ ಕ್ರಮಗಳು ಈ ಕೆಳಕಂಡಂತಿವೆ: 1. ಮುಂಗಾರು ಹಂಗಾಮಿನ ಪೂರ್ವದಲ್ಲಿಯೇ ರಸಗೊಬ್ಬರಗಳನ್ನು ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಸರ್ಕಾರದಿಂದ ಹಂಚಿಕೆ ಮಾಡಲಾಗಿರುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗದಿಪಡಿಸಿ, ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಸಹಕಾರ ಸಂಘಗಳು ಹಾಗು ಅಧಿಕೃತ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರ ಮುಖಾಂತರ ಸಮರ್ಪಕ ರೀತಿಯಲ್ಲಿ ರೈತರಿಗೆ ವಿತರಿಸಲು ಕ್ರಮವಹಿಸಲಾಗಿದೆ. 2. ರಸಗೊಬ್ಬರ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳೊಡನೆ ಪ್ರತಿವಾರ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಸಭೆ ನಡೆಸಿ ರಾಜ್ಯಕ್ಕೆ ರಸಗೊಬ್ಬರದ ಸಮರ್ಪಕ ನಿರ್ವಹಣೆಗೆ ಕ್ರಮವಹಿಸಲಾಗಿದೆ. ಹಾಗೆಯೇ ಪ್ರತಿ ಮಂಗಳ ವಾರ ಕೇಂದ್ರ ರಸಗೊಬ್ಬರ ಮಂತ್ರಾಲಯವು ಸಹ ರಸಗೊಬ್ಬರದ ಸಮರ್ಪಕ ಪೂರೈಕೆ ಮತ್ತು ವಿತರಣೆ ಕುರಿತು ರಾಜ್ಯಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಸಮರ್ಪಕ ವಿತರಣೆಗೆಕ್ರಮವಹಿಸಲಾಗಿದೆ. 3. ರಸಗೊಬ್ಬರದ ತೀವ್ರ ಬೇಡಿಕೆಯ ಸಮಯದಲ್ಲಿ ರೈತರಿಗೆ ರಸಗೊಬ್ಬರವನ್ನು ಒದಗಿಸುವ ಸಲುವಾಗಿ ಕಾಪು ದಾಸ್ತಾನು ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ರವರ ಮುಖಾಂತ ರರಸಗೊಬ್ಬರವನ್ನು ದಾಸ್ತಾನು ಮಾಡಿ ಸಮರ್ಪಕವಾಗಿ ವಿತರಣೆ ಮಾಡಲಾಗುತ್ತಿದೆ.

		2024ನೇ ಸಾಲಿನ ಮುಂಗಾರು ಹಂಗಾಮಿಗೆ (ಏಪ್ರಿಲ್-2024 ರಿಂದ ಸೆಪ್ಟೆಂಬರ್-2024 ರವರೆಗೆ) ಒಟ್ಟು 26,80,000 ಮೆ. ಟನ್ ಪ್ರಮಾಣದ ವಿವಿಧ ಗ್ರೇಡ್‌ಗಳ ರಸಗೊಬ್ಬರದ ಬೇಡಿಕೆಯಿದ್ದು, ಏಪ್ರಿಲ್-2024 ರಿಂದ ಜುಲೈ-2024ರ ಮಾಹೆಯವರೆಗೆ 17,58,225 ಮೆ.ಟನ್ ವಿವಿಧಗ್ರೇಡ್‌ಗಳ ರಸಗೊಬ್ಬರದ ಬೇಡಿಕೆಯಿರುತ್ತದೆ. ಏಪ್ರಿಲ್-2024ಕ್ಕೆ 13,13,675 ಮೆ.ಟನ್ ಪ್ರಮಾಣದ ಆರಂಭ ಶಿಲ್ಕು ಇರುತ್ತದೆ. ದಿನಾಂಕ 01.04.2024ರಿಂದ 18.07.2024ರವರೆಗೆ 15,72,018 ಮೆ.ಟನ್ ರಸಗೊಬ್ಬರ ಸರಬರಾಜಾಗಿದ್ದು, ಒಟ್ಟು ದಾಸ್ತಾನು 28,85,693 ಮೆ.ಟನ್ ಇದ್ದು ಈ ಪೈಕಿ 14,09,468 ಮೆ.ಟನ್ ಮಾರಾಟವಾಗಿದೆ. ಉಳಿಕೆ 14,76,225 ಮೆ.ಟನ್ ವಿವಿಧ ಗ್ರೇಡ್ ಗಳ ರಸಗೊಬ್ಬರದ ದಾಸ್ತಾನಿದ್ದು, ಯಾವುದೇ ರಸಗೊಬ್ಬರದ ಕೊರತೆ ಇರುವುದಿಲ್ಲ.
ಆ)	ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ;	ಕೃಷಿ ಭಾಗ್ಯ ಯೋಜನೆಯಡಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2014-15 ರಿಂದ ಇಲ್ಲಿಯವರೆಗೆ **361** ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ.
ಇ)	ಈ ಯೋಜನೆಗೆ ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ವಿವರಗಳನ್ನು ನೀಡುವುದು)	ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಹಾಗೂ ಪೂರಕ ಘಟಕಗಳನ್ನು ಅನುಷ್ಠಾನ ಮಾಡಲು ಕಲಬುರಗಿ ದಕ್ಷಿಣ ಮತಕ್ಷೇತ್ರಕ್ಕೆ 2014-15 ರಿಂದ ಇಲ್ಲಿಯವರೆಗೆ **ರೂ. 219.40 ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ವರ್ಷವಾರು ನಿರ್ಮಿಸಲಾಗಿರುವ ಕೃಷಿ ಹೊಂಡ ಹಾಗೂ ಭರಿಸಲಾದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಈ)	ತೊಗರಿ ಬೀಜ ಪರಿವರ್ತನೆಗಾಗಿ ಕೃಷಿ ಇಲಾಖೆ ಕೈಗೊಂಡಿರುವ ಕ್ರಮಗಳೇನು.	ತೊಗರಿ ಬೆಳೆಯಲ್ಲಿ TS-3R ತಳಿಯ ಬೀಜ ಪರಿವರ್ತನೆಗಾಗಿ ಕೃಷಿ ಇಲಾಖೆ 2024-25ನೇ ಸಾಲಿನಲ್ಲಿ ನೆಟೆ ರೋಗ ನಿರೋಧಕ ತಳಿಗಳಾದ ಜಿ.ಆರ್.ಜಿ 152 ಮತ್ತು ಜಿ.ಆರ್.ಜಿ 811 ಬೀಜಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.
ಉ)	ಕಲಬುರಗಿ ಜಿಲ್ಲೆಯಲ್ಲಿ ಟಿ.ಎಸ್. 3ಆರ್ ಬಿತ್ತನೆ ಬೀಜವನ್ನು ಬಿತ್ತನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಇದೇ ಬೀಜದ ತಳಿಯಿಂದ ಕಳೆದ ಬಾರಿ ನೇಡೆ ರೋಗ ಬಂದು ತೊಗರಿ ಬೆಳೆ ಹಾಳಾಗಿದ್ದು, ಈ ಬಾರಿಯೂ ಇದೇ ಬೀಜ ಬಿತ್ತುತ್ತಿರುವುದರಿಂದ ಈ	ರೈತರು TS-3R ಬಿತ್ತನೆ ಬೀಜ ಬಿತ್ತನೆ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ನೆಟೆ ರೋಗ ನಿರ್ವಹಣೆ ಬಗ್ಗೆ ಕಲಬುರಗಿ ಜಿಲ್ಲೆಯಲ್ಲಿ ಜಾಗೃತಿ ಮೂಡಿಸಲು ಕೃಷಿ ಇಲಾಖೆ ಈ ಕೆಳಗಿನಂತೆ ಕ್ರಮ ಕೈಗೊಂಡಿದೆ. : **1.** ಮೇ ತಿಂಗಳಿನಲ್ಲಿ ಪ್ರತಿ ಗ್ರಾಮಕ್ಕೆ ತೆರಳಿ ಕೃಷಿ ವಿಜ್ಞಾನಿಗಳು ಹಾಗೂ ಕೃಷಿ ಅಧಿಕಾರಿಗಳು ನೆಟೆ ರೋಗ ನಿರ್ವಹಿಸಲು ಬೀಜೋಪಚಾರ ಆಂದೋಲನ ತರಬೇತಿ ಕೈಗೊಳ್ಳಲಾಗಿದೆ. ನೆಟೆ ರೋಗ ನಿರೋಧಕ ತಳಿಗಳಾದ ಜಿ.ಆರ್.ಜಿ 152 ಮತ್ತು ಜಿ.ಆರ್.ಜಿ 811 ಬೀಜ ಬಳಸಲು ಸಲಹೆ ನೀಡಲಾಗಿದೆ. **2.** ನೆಟೆ ರೋಗ ನಿರ್ವಹಣೆಗೆ ಹಸ್ತ ಪ್ರತಿಗಳನ್ನು ಮುದ್ರಿಸಿ ಗ್ರಾಮ ಮಟ್ಟದಲ್ಲಿ ರೈತರಿಗೆ ನೀಡಿ, ರೈತ ಸಂಪರ್ಕ ಕೇಂದ್ರಗಳಲ್ಲಿ

	ಬಿತ್ತನೆ ಬೀಜದ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಅಂಟಿಸಲಾಗಿದೆ. 3. ಪತ್ರಿಕಾ ಮಾಧ್ಯಮದ ಮೂಲಕ ನೆಟೆ ರೋಗ ಬರದಂತೆ ಮುಂಜಾಗೃತಾ ಕ್ರಮವಾಗಿ ಟ್ರೈಕೋಡರ್ಮಾ/ಕಾರ್ಬನ್‌ಡೈಜಿಮ್ ಶಿಲಿಂಧ್ರನಾಶಕವನ್ನು ಸೇರಿಸಿ ಬೀಜೋಪಚಾರ ಮಾಡಲು ಪ್ರಚಾರ ನೀಡಲಾಗಿದೆ.

ಕೃಷಿ ನಿರ್ದೇಶಕರು

ಅನುಬಂಧ

ಕೃಷಿ ಭಾಗ್ಯ ಯೋಜನೆಯಡಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2014-15 ರಿಂದ ಇಲ್ಲಿಯವರೆಗೆ ನಿರ್ಮಿಸಲಾದ ಕೃಷಿ ಹೊಂಡಗಳ ವಿವರ 18.07.2024

ಕ್ರಸಂ	ಆರ್ಥಿಕ ವರ್ಷ	ವಿಧಾನಸಭಾ ಮತ ಕ್ಷೇತ್ರ	ತಾಲ್ಲೂಕು	ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸಲಾದ ಕೃಷಿ ಹೊಂಡಗಳ ಸಂಖ್ಯೆ	ಒಟ್ಟು	ಕೃಷಿ ಹೊಂಡ ನಿರ್ಮಿಸಲು ಭರಿಸಲಾದ ಅನುದಾನ (ರೂ. ಲಕ್ಷಗಳಲ್ಲಿ)	ಕೃಷಿ ಭಾಗ್ಯ ಯೋಜನೆಯಡಿ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
1	2014-15	ಕಲಬುರಗಿ ದಕ್ಷಿಣ	ಕಲಬುರಗಿ	33	33	10.87	19.80
2	2015-16	ಕಲಬುರಗಿ ದಕ್ಷಿಣ	ಕಲಬುರಗಿ	119	119	50.38	71.40
3	2016-17	ಕಲಬುರಗಿ ದಕ್ಷಿಣ	ಕಲಬುರಗಿ	28	28	12.64	16.80
4	2017-18	ಕಲಬುರಗಿ ದಕ್ಷಿಣ	ಕಲಬುರಗಿ	63	63	27.05	37.80
5	2018-19	ಕಲಬುರಗಿ ದಕ್ಷಿಣ	ಕಲಬುರಗಿ	104	104	47.86	62.40
6	2019-20	ಕಲಬುರಗಿ ದಕ್ಷಿಣ	ಕಲಬುರಗಿ	0	0	0	0
7	2020-21	ಕಲಬುರಗಿ ದಕ್ಷಿಣ	ಕಲಬುರಗಿ	0	0	0	0
8	2021-22	ಕಲಬುರಗಿ ದಕ್ಷಿಣ	ಕಲಬುರಗಿ	0	0	0	0
9	2022-23	ಕಲಬುರಗಿ ದಕ್ಷಿಣ	ಕಲಬುರಗಿ	0	0	0	0
10	2023-24	ಕಲಬುರಗಿ ದಕ್ಷಿಣ	ಕಲಬುರಗಿ	14	14	5.64	11.20
ಒಟ್ಟು				**361**	**361**	**154.44**	**219.4**

ಕೃಷಿ ನಿರ್ದೇಶಕರು

6